



ನಾಡಿಮಿಡಿತದ ಅರಿವಿರುತ್ತದೆ. ಹೀಗಾಗಿ ಪ್ರಾದೇಶಿಕವಾಗಿಯೂ ಮಹಿಳೆಯರ ಮನಕ್ಕೊಪ್ಪುವ ಹಾಗೂ ಕಣ್ಮನ ಸೆಳೆಯುವ ಆಭರಣಗಳನ್ನು ತಯಾರಿಸಿ ಮಾರುಕಟ್ಟೆಗೆ ತರುತ್ತಾರೆ. ಇದಕ್ಕೆಲ್ಲ ಸೂಕ್ತ ವೇದಿಕೆ ಸಿಗುವುದು 'ಆಭರಣ ಮೇಳ'ದಲ್ಲೇ.

ಆಭರಣ ಮೇಳಗಳ ಇನ್ನೊಂದು ಪ್ಲಸ್ ಪಾಯಿಂಟ್ ಎಂದರೆ ಲೇಟೆಸ್ಟ್ ಟ್ರೆಂಡ್‌ನ ಒಡವೆಗಳು, ಫ್ಯಾಷನೆಬಲ್ ಆಭರಣಗಳನ್ನು ಆಯ್ಕೆ ಮಾಡಿಕೊಂಡು ಕೊಳ್ಳಬಹುದು. ಚಿನ್ನ, ಬೆಳ್ಳಿ, ವಜ್ರ, ದುಬಾರಿ ಹರಳಿನ ಒಡವೆಗಳು, ಟೆಂಪಲ್ ಜ್ಯುವೆಲ್ಲರಿ, ಇಮಿಟೇಷನ್ ಜ್ಯುವೆಲ್ಲರಿ ಮುಂತಾದವು ಒಂದೇ ಸೂರಿನಡಿ ಕೈಗೆಟುಕುವ ದರದಲ್ಲಿ ಕೊಳ್ಳಬಹುದು. ಮದುವೆ, ಹಬ್ಬ ಹರಿದಿನಗಳಲ್ಲಿ ರೇಷ್ಮೆ ಸೀರೆ ಧರಿಸಿದಾಗ ತೊಟ್ಟುಕೊಳ್ಳಲು ಇಂಥ ಆಭರಣಗಳು ಸೂಕ್ತ ವಾಗಿವೆ. ಮಹಿಳೆಯರು ಮತ್ತಷ್ಟು ಇಷ್ಟಪಡುವುದು ಮಾಣಿಕ್ಯ, ವಜ್ರ, ಪಚ್ಚೆ ಹರಳುಗಳಿಂದ ತಯಾರಿಸಿದ ಕೆಲವು ಆಭರಣಗಳು. ಇವು ಗ್ರ್ಯಾಂಡ್ ಲುಕ್ ನೀಡಲು ಸಹಕಾರಿಯಾಗಿದೆ. ಇವು ಜನರ ಸಮಕಾಲೀನ ಭಾವನೆಗಳಿಗೂ ಸ್ಪಂದಿಸುತ್ತದೆ.



## ಚಿನ್ನದ ಹೂಡಿಕೆ

ಚಿನ್ನ ಎಂದಿಗೂ ಆಪದ್ಧನ. ಹೀಗಾಗಿ ಹಣ ಹೂಡಿಕೆ ಬಗ್ಗೆ ಮುಂದಾಲೋಚನೆ ಇದ್ದೇ ಇರುತ್ತದೆ. ಹೆಣ್ಣು ಮಗು ಇರುವ ಮನೆಯಲ್ಲಿ ಆಭರಣಗಳ ಸಂಗ್ರಹ ಇದ್ದದ್ದೇ. ಈ ಎಲ್ಲ ಇಂಗಿತವನ್ನು ಮಡಿಲಲ್ಲಿಟ್ಟುಕೊಂಡು ಚಿನ್ನದ ಮಳಿಗೆಗಳು ಒಡವೆಗಳನ್ನು ವೈವಿಧ್ಯಮಯ ಮತ್ತು ವಿಭಿನ್ನ ವಿನ್ಯಾಸಗಳಲ್ಲಿ ನೀಡುವತ್ತ ಪ್ರಯತ್ನ ಪಡುತ್ತವೆ. ಅದರಲ್ಲೂ ಆಭರಣಗಳು ಸಾಂಪ್ರದಾಯಿಕ ಮತ್ತು ಸಮಕಾಲೀನ ಎರಡೂ ಮನೋಭಾವದವರನ್ನು ಸೆಳೆಯುವಂತಿದ್ದರೆ ಅದು ಎಲ್ಲ ರೀತಿಯ ಉಡುಗೆಗಳಿಗೆ ಸರಿ ಹೊಂದುತ್ತವೆ. ಮಲ್ಟಿ ಪರ್ಪಸ್ ಆಭರಣಗಳಿಗೂ ಈಗ ಬೇಡಿಕೆ ಹೆಚ್ಚಿದೆ.

## ಹುಬ್ಬಳ್ಳಿಯಲ್ಲಿ ಜ್ಯುವೆಲ್ಲರಿ ಶೋ

ಅಂದ ಹಾಗೆ ಅಕ್ಟೋಬರ್ 12ರಿಂದ 14ರವರೆಗೆ ಹುಬ್ಬಳ್ಳಿಯಲ್ಲಿ 'ದಿ ಜ್ಯುವೆಲ್ಲರಿ ಶೋ' ನಡೆಯಲಿದ್ದು ಸುಮಾರು 25 ವಿವಿಧ ಬ್ರ್ಯಾಂಡ್‌ನ ಆಭರಣ ವರ್ತಕರು ಹಲವು ವಿನ್ಯಾಸಗಳ ಆಭರಣಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ.

ಈ ಹಿಂದೆ ಇಂಥ ಆಭರಣ ಮೇಳಗಳು ರಾಜಧಾನಿ ಬೆಂಗಳೂರಿಗೆ ಮಾತ್ರ ಸೀಮಿತವಾಗಿತ್ತು. ದೂರದೂರಿನಿಂದ ಬಂದ ಆಭರಣ ಪ್ರಿಯ ಮಹಿಳೆಯರು ಇಂತಹ ಆಭರಣ ಮೇಳಕ್ಕೆ ಲಗ್ಗೆ ಇಡಲು ತುದಿಗಾಲಲ್ಲಿ ನಿಲ್ಲಬೇಕಿತ್ತು. ಆದರೆ ಪಟ್ಟಣದ ಜನರ ಆಸೆ ಪೂರೈಸಲೆಂದೇ ಈ ಸಲ ಹುಬ್ಬಳ್ಳಿಯಲ್ಲಿ ಆಭರಣ ಮೇಳ ನಡೆಯುತ್ತಿದೆ.

ಹುಬ್ಬಳ್ಳಿಯ ಗೋಕುಲ ರಸ್ತೆಯಲ್ಲಿರುವ 'ದಿ ಡೆನಿಸನ್' ಹೋಟೆಲ್‌ನಲ್ಲಿ ಈ ಪ್ರದರ್ಶನ ಮಾರಾಟ ಮೇಳ ನಡೆಯುವುದು. ಕನ್ನಡದ ಹೆಸರಾಂತ ನಟಿ ಶ್ರುತಿ ಹರಿಹರನ್ ಈ ಬಾರಿ ಆಭರಣ ಮೇಳದ ಪ್ರಚಾರ ರಾಯಭಾರಿಯಾಗಿದ್ದಾರೆ.

ಈ ಆಭರಣ ಮೇಳದಲ್ಲಿ ಬಿಐಎಸ್ ಹಾಲ್‌ಮಾರ್ಕ್ ಜ್ಯುವೆಲ್ಲರಿ, ಅಂತರಾಷ್ಟ್ರೀಯ ಗ್ರೇಡೆಡ್ ಆಭರಣಗಳ ಜತೆಗೆ ಚಿನ್ನ ಬೆಳ್ಳಿ, ವಜ್ರದ ಒಡವೆಗಳು ಸಿಗುತ್ತವೆ. ಮದುವೆ, ದಸರಾ, ದೀಪಾವಳಿ ಹಬ್ಬದ ಸಂದರ್ಭದಲ್ಲಿ ಇಂಥ ವೈವಿಧ್ಯಮಯ ಆಭರಣಗಳು ಕಾಲಕ್ಕೆ ತಕ್ಕ ಹೊಸ ಟ್ರೆಂಡ್‌ನೊಂದಿಗೆ ಉಡುಪಿನ ಜತೆಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಹುಬ್ಬಳ್ಳಿಯಲ್ಲಿ ನಡೆಯುವ ಒಡವೆ ಶೋನಲ್ಲಿ ಧವನಂ, ಜಿಆರ್‌ಟಿ, ನವರತನ್, ನಿಖಾರ್, ಪಂಚಕೇಸರಿ, ಶ್ರೀವಾರಿ, ಶ್ರೀಗಣೇಶ, ಶಿವಾನಿ..ಮುಂತಾದ ಆಭರಣ ಮಳಿಗೆಗಳು ಭಾಗವಹಿಸುತ್ತಿವೆ.

ಒಂದೇ ಸೂರಿನಡಿ ಎಲ್ಲ ವೈವಿಧ್ಯಗಳ ಆಭರಣಗಳು, ಅದೂ ಕೈಗೆಟುಕುವ ದರದಲ್ಲಿ ಲಭಿಸಿದರೆ ಹೆಣ್ಣಿಗೆ ಸ್ವರ್ಗಕ್ಕೆ ಮೂರೇ ಗೇಣು. ಮನೆಯೊಡೆಯನ ಜೇಬಿಗೆ ಕತ್ತರಿ ಬಿದ್ದರೂ ಸರಿ, ಮನೆಯೊಡತಿಯ ಮನದಾಸೆ ತಣಿಸಲು ಸದಾ ಸಿದ್ಧ. ಇಂಥವರಿಗೆ ಆಗಾಗ ನಡೆಯುವ ಜ್ಯುವೆಲ್ಲರಿ ಶೋಗಳು ಸಹಕಾರಿಯಾಗುತ್ತವೆ.